ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಆ ಸುದ್ದಿ ನಿಜವೇ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿಬಿಡಲಿ. ಅನಂತರ ವಿವರವಾಗಿ ಮಾತನಾಡೋಣ.

ಶ್ರೀ ಜೆ. ರಾಜುಗೌಡ : ಮಾನ್ಯ ಅಧ್ಯಕ್ಷರೆ, ಈ ದಿನದ ಕಾರ್ಯಕ್ರಮ ಪಟ್ಟಿಯಲ್ಲಿ ಮೊದಲು ಏನಿದೆಯೋ ಅದರಂತೆ ಮಾಡಿ.

ಅಧ್ಯಕ್ಷರು : ಮೊದಲು ಪ್ರಶ್ನೋತ್ತರ ವೇಳೆ ಮುಗಿಯಲಿ. ಆ ನಂತರ ಆ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಬಹಳ ಸಂತೋಷದಿಂದ ಇದ್ದಾರೆ. ಅವರ ಮುಖ ಚಹರೆಯನ್ನು ನೋಡಿದರೆ ಡಾ|| ರಾಜ್‌ಕುಮಾರ್‌ರವರ ಬಿಡುಗಡೆಯಾಗಿರಬಹುದು. ಆ ಸುದ್ದಿ ಅವರಿಗೆ ಬಂದಿರಬಹುದು. ಅವರ ಆ ಸಂತೋಷವನ್ನು ನಮಗೂ ಹಂಚಬೇಕಾಗಿ ನಾವು ಕೇಳುತ್ತಿದ್ದೇವೆ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಡಾ|| ರಾಜ್‌ಕುಮಾರ್ ರವರ ಬಿಡುಗಡೆ ವಿಚಾರದಲ್ಲಿ ನಾನಾ ವಿಧವಾದಂಥ ವದಂತಿಗಳ ಬಗ್ಗೆ ಬೆಂಗಳೂರು ನಗರ ಮತ್ತು ರಾಜ್ಯದ ಹಲವಾರು ಭಾಗಗಳಿಂದ ದೂರವಾಣಿ ಕರೆಗಳು ಬರುತ್ತಿವೆ, ಆ ಸುದ್ದಿ ನಿಜವೇ ಎಂದು ಎಲ್ಲರೂ ಕೇಳುತ್ತಿದ್ದಾರೆ. ಆದರೆ ತಮಿಳುನಾಡು ಸರ್ಕಾರದಿಂದ ಇದುವರೆಗೆ ಯಾವುದೇ ಖಚಿತವಾದ ಮಾಹಿತಿ ಬಂದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರುಗಳೇನು ಈ ಬಗ್ಗೆ ಕಾತುರತೆಯನ್ನು ವ್ಯಕ್ತಪಡಿಸಿದ್ದಾರೋ ಅದೇ ಕಾತುರತೆಯಿಂದ ನಾವು ಕೂಡ ಆ ಸುದ್ದಿಗೋಸ್ಕರ ಕಾಯುತ್ತಾ ಇದ್ದೇವೆ. ಡಾ|| ರಾಜ್‌ಕುಮಾರ್‌ರವರು ಬಿಡುಗಡೆಯಾಗಿರುವ ಬಗ್ಗೆ ನಮಗೆ ಮಾಹಿತಿ ಬಂದ ತಕ್ಷಣ ಅದಕ್ಕೆ ಏನಾದರೂ ಕ್ರೆಡಿಬಲಿಟಿ ಇದ್ದರೆ ಮೊದಲು ಈ ಸದನಕ್ಕೆ ತಿಳಿಸಿ ಅನಂತರ ಬಾಕಿಯವರಿಗೆ ನಾನು ತಿಳಿಸುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬಾಗಿಲಕೋಟೆ ತಾಲ್ಲೂಕಿನ ಹೆಚ್ಚುವರಿ ಅಂಗನವಾಡಿ ಕೇಂದ್ರಗಳು

421 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ತಾಲ್ಲೂಕಿನಲ್ಲಿ ಇರುವ ನಗರ ಮತ್ತು ಗ್ರಾಮೀಣ ಭಾಗದ ಅಂಗನವಾಡಿ ಕೇಂದ್ರಗಳೆಷ್ಟು?

ಅ) ತಾಲ್ಲೂಕಿನಲ್ಲಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಬೇಕಾದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು? ಇವುಗಳನ್ನು ಪ್ರಾರಂಭಿಸಲು ತೆಗೆದುಕೊಂಡು ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಬಾಗಲಕೋಟೆ ತಾಲ್ಲೂಕಿನಲ್ಲಿ ಒಟ್ಟು 219 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು ಎಲ್ಲಾ ಅಂಗನವಾಡಿ ಕೇಂದ್ರಗಳು ಕಾರ್ಯನಿರತಗೊಂಡಿರುತ್ತವೆ. ಇವುಗಳಲ್ಲಿ 22 ಅಂಗನವಾಡಿ ಕೇಂದ್ರಗಳು ನಗರ ಪ್ರದೇಶದಲ್ಲೂ ಹಾಗೂ 197 ಅಂಗನವಾಡಿ ಕೇಂದ್ರಗಳು ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಹೊಸದಾಗಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರವು ಸಂಪನ್ಮೂಲ ಕೊರತೆಯಿಂದ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಹಾಲಿ ಮಂಜೂರು ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದೆ.

ಶ್ರೀ ಪಿ. ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೇ, ಬಾಗಲಕೋಟೆ ತಾಲ್ಲೂಕಿನಲ್ಲಿ ಗ್ರಾಮೀಣ ಹಾಗೂ ನಗರ ಭಾಗಗಳಲ್ಲಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಬೇಕಾದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಹಿಂದಿನ ಅಧಿವೇಶನದಲ್ಲೂ ಕೂಡ ನಾನು ಇದೇ ಪ್ರಶ್ನೆ ಕೇಳಿದ್ದಾಗ ಇದೇ ರೀತಿಯ ಉತ್ತರವನ್ನು ಕೊಟ್ಟಿದ್ದರು. ಬಾಗಲಕೋಟೆ ತಾಲ್ಲೂಕಿನಲ್ಲಿ ಯಾವ ವರ್ಷದಿಂದ ಅಂಗನವಾಡಿ ಕೇಂದ್ರಗಳ ಕೊರತೆ, ಇರುವುದು ಸರ್ಕಾರಕ್ಕೆ ಕಂಡು ಬಂದಿದೆ ಎಂದು ನಾನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ನಮ್ಮ ತಾಲ್ಲೂಕು ವಿಶೇಷವಾಗಿ ಹಿಂದುಳಿದಂತಹ ತಾಲ್ಲೂಕು ಆಗಿದೆ. ಅಲ್ಲಿಗೆ ಹೆಚ್ಚು ಅಂಗನವಾಡಿ ಕೇಂದ್ರಗಳು ಬೇಕಾಗಿವೆ. ಮಕ್ಕಳ ಅಭಿವೃದ್ಧಿ ದೃಷ್ಟಿಯಿಂದ ನಾವು ಈ ದಿಸೆಯಲ್ಲಿ ಚಿಂತನೆ ಮಾಡುವುದು ಅವಶ್ಯವಾಗಿದೆ. ರಾಜ್ಯ ಸರ್ಕಾರವಾದರೂ ಕೂಡ ಈ ದಿಸೆಯಲ್ಲಿ ಚಿಂತನೆ ಮಾಡುವುದು ಅವಶ್ಯವಾಗಿದೆ. ರಾಜ್ಯ ಸರ್ಕಾರವಾದರೂ ಕೂಡ ಈ ದಿಸೆಯಲ್ಲಿ ವಿಶೇಷವಾದಂತಹ ಕಾರ್ಯಕ್ರಮವೊಂದನ್ನು ಹಾಕಿಕೊಂಡು ಅಲ್ಲಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು, ವಿಶೇಷವಾಗಿ ಬಾಗಲಕೋಟೆ ತಾಲ್ಲೂಕಿನ ಮುಳುಗಡೆ ಭಾಗದಲ್ಲಿ ತೆರಯಲಿಕ್ಕೆ ಯೋಚನೆ ಮಾಡುತ್ತದೆಯೇ ಎಂಬುದನ್ನು ನಾನು ಕೇಳಬಯಸುತ್ತೇನೆ.

ಶ್ರೀಮತಿ ಮೋಟಮ್ಮ : ಸನ್ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ರಾಜ್ಯದ ಬಹಳಷ್ಟು ಜಿಲ್ಲೆ ಮತ್ತು ತಾಲ್ಲೂಕುಗಳಿಂದ ಈ ಬಗ್ಗೆ ಬೇಡಿಕೆಗಳು ಬಂದಿವೆ.ಅದಕ್ಕಾಗಿ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೆವು. ಸುಮಾರು 6000 ಹೆಚ್ಚುವರಿ ಅಂಗನವಾಡಿ ಕೇಂದ್ರಗಳು ಬೇಕೆಂಬ ನಮ್ಮ ಬೇಡಿಕೆಯನ್ನು ನಾವು ಕೇಂದ್ರ ಸರ್ಕಾರಕ್ಕೆ ದಿನಾಂಕ

13.11.1997ರಂದು ಕಳುಹಿಸಿದ್ದೆವು. ಆ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ದಿನಾಂಕ 30.3.2000ರಂದು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಸಂಪನ್ಮೂಲದ ಕೊರತೆಯಿಂದ ಹಾಗೂ ರಾಷ್ಟ್ರದ ಇನ್ನೂ ಹಲವಾರು ರಾಜ್ಯಗಳಲ್ಲಿ ಐಸಿಡಿಎಸ್ ಪ್ರೋಗ್ರಾಂ ಅನ್ನು ಕವರ್ ಮಾಡಬೇಕಾಗಿರುವುದರಿಂದ ರಾಜ್ಯಕ್ಕೆ ಹಾಲಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅನ್-ಕವರ್ಡ್ ಸ್ಟೇಟ್ಸ್‌ಗಳಲ್ಲಿ ಈ ಪ್ರೋಗ್ರಾಮ್ ಕವರ್ ಆದ ನಂತರ ರಾಜ್ಯಕ್ಕೆ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುತ್ತೇವೆ ಎಂದು ಕೇಂದ್ರ ಸರ್ಕಾರ ಸ್ಪಷ್ಟವಾಗಿ ಹೇಳಿದೆ. ಈ ವಿಚಾರವನ್ನು ರಾಜ್ಯದ ಎಲ್ಲಾ ಎಂ.ಪಿ.ಗಳ ಗಮನಕ್ಕೆ ತಂದು ಈ ದಿಸೆಯಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ನಾವು ಮನವಿ ಮಾಡಿದ್ದೇವೆ. ಸದನದ ಆ ಕಡೆ ಇರುವಂತಹ ನಮ್ಮ ಅನೇಕ ಮಾನ್ಯ ಸದಸ್ಯರುಗಳ ಸ್ನೇಹಿತರು ಎಂ.ಪಿ.ಗಳು ಆಗಿದ್ದಾರೆ. ಮತ್ತು ಸಚಿವರಾಗಿದ್ದಾರೆ. ಅವರುಗಳೂ ಕೂಡ ಕೇಂದ್ರಕ್ಕೆ ಒತ್ತಾಯ ಮಾಡಿ, ನಮ್ಮ ರಾಜ್ಯಕ್ಕೆ ಬೇಕಾದಂತಹ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಬೇಕೆಂದು ನಮ್ಮ ಬೇಡಿಕೆ ಏನಿದೆ ಅದನ್ನು ಈಡೇರಿಸಿಕೊಡಬೇಕು ಎಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೇ, ತಾಲ್ಲೂಕಿನ ಮುಳುಗಡೆ ಭಾಗದ ಸಂತ್ರಸ್ತರು ಅನೇಕ ಶಿಬಿರಗಳಲ್ಲಿ ಇದ್ದಾರೆ, ಮತ್ತೆ ಕೆಲವರು ಅಲ್ಲಿ ಬೀದಿಯಲ್ಲಿದ್ದಾರೆ. ದಯವಿಟ್ಟು ಸರ್ಕಾರದವರು ಈ ಬಗ್ಗೆ ವಿಶೇಷವಾದ ಕಾರ್ಯಕ್ರಮ ಹಾಕಿಕೊಂಡು 2-3 ಹೆಚ್ಚುವರಿ ಕೇಂದ್ರಗಳನ್ನಾದರೂ ಅಲ್ಲಿ ತೆರೆಯಬೇಕೆಂದು ನಾನು ಕೋರುತ್ತೇನೆ. ನಿರಾಶ್ರಿತರ ಶಿಬಿರಗಳಲ್ಲಿನ ಮಕ್ಕಳು ಏನೂ ವ್ಯವಸ್ಥೆಯಿಲ್ಲದೇ ಬೀದಿಯಲ್ಲಿ ಆಡ್ಡಾಡುತ್ತಿದ್ದಾರೆ. ಅವರಿಗಾಗಿ ವಿಶೇಷವಾದ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಒಂದು ಸಲಹೆ ಕೊಡಲಿಚ್ಛಿಸುತ್ತೇನೆ. ನಾವು ರಾಜ್ಯ ಸರ್ಕಾರದಿಂದಲೇ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭ ಮಾಡಲು ಸುಮಾರು 40-50 ಸಾವಿರ ರೂಪಾಯಿಗಳು ವೆಚ್ಚವಾಗುತ್ತದೆ. ಅದರ ಬದಲಾಗಿ ಯಾವ್ಯಾವ ಅಂಗನವಾಡಿ ಕೇಂದ್ರಗಳಲ್ಲಿ 2-10 ಮಕ್ಕಳು ಮಾತ್ರ ಇದ್ದಾರೋ ಅಂತಹ ಅಂಗನವಾಡಿ ಕೇಂದ್ರಗಳನ್ನು ಎಲ್ಲಿ ಬೇಡಿಕೆ ಇದೆಯೋ ಅಂತಹ ಕಡೆಗಳಿಗೆ ಶಿಫ್ಟ್ ಮಾಡಲಿಕ್ಕೆ ಮಾನ್ಯ ಸದಸ್ಯರು ಸರ್ಕಾರಕ್ಕೆ ಮನವಿ ಮಾಡಿಕೊಳ್ಳಬೇಕು. ಅದಕ್ಕೆ ಅಲ್ಲಿನ ಗ್ರಾಮ ಪಂಚಾಯಿತಿಯವರು, ಟಿಪಿಎಸ್ ಮೆಂಬರ್ಸ್ ಅವಕಾಶ ಕೊಡುವುದಿಲ್ಲ ಎಂಬುದು ನನಗೆ ಗೊತ್ತು. ಆದರೆ ಮಾನ್ಯ ಸದಸ್ಯರು ಅವರಿಗೆ ಕನ್‌ವಿನ್ಸ್ ಮಾಡಿ ಅಗತ್ಯವಿರುವ ಕಡೆಗೆ ಅಂಗನವಾಡಿ ಕೇಂದ್ರಗಳನ್ನು ಶಿಫ್ಟ್ ಮಾಡಿಕೊಳ್ಳಲಿಕ್ಕೆ ಅನುಕೂಲ ಮಾಡಿಕೊಳ್ಳಬೇಕು. ಇಂತಹ ವಿಶೇಷವಾದ ಮುಳುಗಡೆ ಪ್ರದೇಶಗಳಲ್ಲಿ.....

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೇ, ನಮ್ಮ ತಾಲ್ಲೂಕಿನಲ್ಲಿ ಮೊದಲೇ ಅಂಗನವಾಡಿ ಕೇಂದ್ರಗಳ ಕೊರತೆ ಇದೆ, ಅಲ್ಲಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳು ಯಾವುವೂ ಇರುವುದಿಲ್ಲ. ದಯಮಾಡಿ ನಿರಾಶ್ರಿತರ ಶಿಬಿರಗಳಿಗೆ ಬೇರೆ ಕಡೆಯಿಂದ ಕೇಂದ್ರಗಳನ್ನು ಶಿಫ್ಟ್ ಮಾಡುವಂತಹ ಕೆಲಸವನ್ನು ಮಾಡಿಸಿ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ನನ್ನ ಕಷ್ಟ ಏನೆಂಬುದನ್ನು ನಾನು ಮಾನ್ಯ ಸದಸ್ಯರಿಗೆ ಈಗಾಗಲೇ ತಿಳಿಯಪಡಿಸಿದ್ದೇನೆ. ಒಂದು ಕಡೆ ನಾವು ವಿಶೇಷ ಪ್ರಕರಣವೆಂದು ಪರಿಗಣಿಸಿ ಕೇಂದ್ರಗಳನ್ನು ಮಂಜೂರು ಮಾಡಿದ್ದೇ ಆದರೆ ಆ ತರಹ ಬೇರೆ ಬೇರೆ ಕ್ಷೇತ್ರಗಳಿಂದಲೂ ಕೂಡ ಬೇಡಿಕೆಗಳು ಬರಬಹುದು. ಆದರೆ ಸರ್ಕಾರದಿಂದಲೇ ಎಲ್ಲವನ್ನೂ ಪ್ರಾರಂಭ ಮಾಡಲಿಕ್ಕೆ ಕಷ್ಟವಾಗುತ್ತದೆ.

ಶ್ರೀ ಪಿ.ಹೆಚ್. ಪೂಜಾರ್ : ನಮ್ಮದು ಎಕ್ಸ್‌ಟ್ರಾರ್ಡಿನರಿ ಕೇಸ್ ಆಗಿದೆ. ಬಾಗಲಕೋಟೆ ತಾಲ್ಲೂಕು ಮುಳುಗಡೆ ಪ್ರದೇಶವಾದ್ದರಿಂದ ಈ ರೀತಿ ವಿಶೇಷವಾಗಿ ಪರಿಗಣಿಸಿ ಎಂದು ನಾನು ಕೇಳುತ್ತಿದ್ದೇನೆ. ಈ ರೀತಿ ಬೇರೆ ಕಡೆ ಎಲ್ಲೂ ಇಲ್ಲ.

ಶ್ರೀಮತಿ ಮೋಟ್ಟಮ್ಮ : ಮಾನ್ಯ ಅಧ್ಯಕ್ಷರೇ, ನಾನು ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಹೇಗೆ ನಾವು ಇದನ್ನು ಕೆಲವು ಕ್ಷೇತ್ರಗಳಲ್ಲಿ ಮಂಜೂರು ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ವಿಚಾರ ಮಾಡಿ ನಂತರ ಅದನ್ನು ಮಾಡಿಕೊಡಲಿಕ್ಕೆ ಸಾಧ್ಯ. ಏಕೆಂದರೆ ಹೊಸದಾಗಿ ಆರಂಭಿಸಲು ಹಣದ ಹೊರೆ ಬೀಳುತ್ತದೆ. ಆ ದೃಷ್ಟಿಯಿಂದ ನಾವು ಈ ಬಗ್ಗೆ ವಿಚಾರ ಮಾಡಬೇಕಾಗಿದೆ.

ಶ್ರೀ ವಿಶ್ವೇಶ್ವರಿ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲೂ ಕೂಡ ಕೊಡಸಳ್ಳಿ ಪುನರ್ವಸತಿ ಕ್ಷೇತ್ರ ಮಾಡಿರುವಲ್ಲಿ ಮೂರು ಕಡೆ ರೀ-ಹ್ಯಾಬಿಲಿಟೇಷನ್ ಮಾಡಿದ್ದಾರೆ. ಹಾರೋವಳ್ಳಿ, ವೈದ್ಯಗಾರ, ಕಲ್ಲೇಶ್ವರದಲ್ಲಿ ಅಲ್ಲೂ ಈ ಅಂಗನವಾಡಿ ಸಮಸ್ಯೆಯಾಗಿದೆ. ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದಂತೆ ಎಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಕಡಿಮೆ ಮಕ್ಕಳು ಇದ್ದಾರೋ ಅಂತಹವುಗಳನ್ನು ಸರ್ಕಾರದಿಂದಲೇ ಬೇಡಿಕೆ ಇರುವ ಕಡೆಗೆ ಶಿಫ್ಟ್ ಮಾಡಿಸಬೇಕು. ತಾಲ್ಲೂಕು ಪಂಚಾಯಿತಿಯವರನ್ನು ಕೇಳಿ, ನಾವು ಅಲ್ಲೇ ನಿರ್ಣಯ ಮಾಡಿ ಇಂತಹ ಕೇಂದ್ರಗಳನ್ನು ಬೇರೆಡೆಗೆ ಶಿಫ್ಟ್ ಮಾಡಿಸುವುದಕ್ಕಿಂತಲೂ ಸರ್ಕಾರದಿಂದಲೇ ಈ ಕೆಲಸ ಮಾಡುವುದು ಒಳ್ಳೆಯದು. ಸರ್ಕಾರದಿಂದಲೇ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಅಥವಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನವನ್ನು ಕಳುಹಿಸಿದರೆ ಅನುಕೂಲವಾಗುತ್ತದೆ. ಎಷ್ಟು ಸಂಖ್ಯೆಗಿಂತ ಕೆಳಗೆ ಮಕ್ಕಳು ಅಂಗನವಾಡಿ ಕೇಂದ್ರವೊಂದರಲ್ಲಿ ಇರುತ್ತಾರೋ ಅಂತಹ ಅಂಗನವಾಡಿ ಕೇಂದ್ರಗಳನ್ನು ಬೇಡಿಕೆ ಇರುವ ಇಂತಹ ಕಡೆಗೆ ಶಿಫ್ಟ್ ಮಾಡಿ ಎಂದು ಸರ್ಕಾರವೇ ಸುತ್ತೋಲೆಯೊಂದನ್ನು ಕಳುಹಿಸಿ ಅದನ್ನು ಇಂಪ್ಲಿಮೆಂಟ್ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಇದರಿಂದ ಮಕ್ಕಳಿಗೆ ಯೋಗ್ಯವಾದಂತಹ ಶಿಕ್ಷಣ ಮತ್ತು ಸಂಸ್ಕಾರ ಸಿಗುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಆ ಬಗ್ಗೆ ಸರ್ಕಾರದವರು ನಾವು ವಿಚಾರ ಮಾಡಿದ್ದೇವೆ. ಮುಳುಗಡೆ ಪ್ರದೇಶದಲ್ಲಿ ಯಾವುದಾದರೂ ಅಂಗನವಾಡಿ ಕೇಂದ್ರಗಳಿದ್ದರೆ ಮುಳುಗಡೆಯಾಗುವ ಪ್ರದೇಶದ ಗ್ರಾಮ ಇನ್ನೊಂದು ಕಡೆಗೆ ಶಿಫ್ಟ್ ಆದಾಗ ಆ ಕೇಂದ್ರವೂ ಕೂಡ ಅಲ್ಲಿಗೆ ಶಿಫ್ಟ್ ಮಾಡಲಿಕ್ಕೆ ಸಾಧ್ಯವಿದೆಯಲ್ಲವೇ?

ಶ್ರೀ ಪಿ.ಹೆಚ್. ಪೂಜಾರ್ : ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಪೂರ್ತಿಯಾಗಿ ಶಿಫ್ಟ್ ಆಗುವಂತಹ ವ್ಯವಸ್ಥೆ ಇರುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ : ಅಲ್ಲಿ ಅರ್ಧ ಭಾಗ ಶಿಫ್ಟ್ ಆಗುತ್ತದೆ ಇನ್ನರ್ಧ ಭಾಗ ಶಿಫ್ಟ್ ಆಗುವುದಿಲ್ಲ. ಅದು ಇದ್ದಲ್ಲೇ ಇರುತ್ತದೆ. ಹೀಗಾದಾಗ ಅಂಗನವಾಡಿ ಮೊದಲಿನ ಭಾಗದಲ್ಲೇ ಇರುತ್ತದೆ. ಉಳಿದ ಅರ್ಧದ ಭಾಗದಲ್ಲಿ ಇರುವುದಿಲ್ಲ. ಈ ರೀತಿಯ ಅನೇಕ ಗೊಂದಲಗಳಿವೆ.

ಅಧ್ಯಕ್ಷರು : ಎಲ್ಲೆಲ್ಲಿ ಮುಳುಗಡೆ ಪ್ರದೇಶಗಳಿವೆಯೋ ಅಂತಹ ಕಡೆ ಹೆಚ್ಚಿನ ಗಮನ ಕೊಡಿ.

ಶ್ರೀ ಪಿ.ಹೆಚ್. ಪೂಜಾರ್ : ಒಂದು ಹಳ್ಳಿ ಶಿಫ್ಟ್ ಆಗಬೇಕಾದರೆ ಅದು 6 -7 ವರ್ಷಗಳ ಒಂದು ಕಂಟಿನ್ಯೂಯಸ್ ಪ್ರೊಸೆಸ್ ಆಗಿದೆ. ಅದು ಒಂದೇ ಬಾರಿಗೆ ಶಿಫ್ಟ್ ಆಗುವುದಿಲ್ಲ.

ಶ್ರೀಮತಿ ಮೋಟಮ್ಮ : ಆ ಬಗ್ಗೆ ನಾನು ಪ್ರಯತ್ನ ಮಾಡುತ್ತೇನೆ.

ಶಿವಮೊಗ್ಗದಲ್ಲಿರುವ ಸಾರಿಗೆ ಸಂಸ್ಥೆಯ ಆದಾಯ

422 - ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದಲ್ಲಿ ಇರುವ ಸಾರಿಗೆ ಸಂಸ್ಥೆಯಿಂದ 1999-2000 ಹಾಗೂ 2000-01ನೇ ಸಾಲಿನಲ್ಲಿ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು? ಈ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮಗಳಿಗೇನಾದರೂ ಹಣ ಬಿಡುಗಡೆಯಾಗಿದೆಯೇ? ಹಾಗೂ ಸಾರಿಗೆ ಸಂಸ್ಥೆಯ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ದಾವಣಗೆರೆ ವಿಭಾಗದ ಶಿವಮೊಗ್ಗ ಘಟಕವು 1999-2000ನೇ ಸಾಲಿನಲ್ಲಿ ರೂ.1643.04 ಲಕ್ಷ ಸಾರಿಗೆ ಆದಾಯವನ್ನು ಹಾಗೂ 2000-2001ನೇ ಸಾಲಿನಲ್ಲಿ (31ರ ಆಗಸ್ಟ್ ವರೆಗೆ) ರೂ. 761.20 ಲಕ್ಷ ರೂಪಾಯಿಗಳ ಆದಾಯವನ್ನು ಗಳಿಸಿರುತ್ತದೆ.

ಪ್ರಯಾಣ ದರ ಅಗತ್ಯತೆಗಳನ್ನು ಪರಿಶೀಲಿಸಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಂಸ್ಥೆಯು ಕೈಗೊಳ್ಳುತ್ತಲಿದ್ದು, ಪ್ರಸ್ತುತ ಶಿವಮೊಗ್ಗ ಬಸ್ ನಿಲ್ದಾಣದ ನಿಲುಗಡೆ ಪ್ರದೇಶವನ್ನು ಹಾಗೂ ಘಟಕದ ನಿಲುಗಡೆ ಪ್ರದೇಶವನ್ನು ಡಾಂಬರೀಕರಣಗೊಳಿಸಲು ಈ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಅವಕಾಶ ಮಾಡಲಾಗಿದೆ.

ಹಾಲಿ ಇರುವ ಡಿಪೋ ಮತ್ತು ಬಸ್ ಸ್ಟೇಷನ್ ಕಟ್ಟಡಗಳು ಅವಶ್ಯಕತೆಗೆ ಅನುಗುಣವಾಗಿರುವುದರಿಂದ ಹೊಸ ಕಟ್ಟಡ ನಿರ್ಮಾಣದ ಅವಶ್ಯಕತೆ ಇರುವುದಿಲ್ಲ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಶಿವಮೊಗ್ಗ ಡಿಪೋ ಕೂಡ ಈಗಾಗಲೇ ಬಹಳ ವಿಸ್ತಾರವಾಗಿ ಬೆಳೆಯುತ್ತಿದೆ. ಮಾನ್ಯ ಮಂತ್ರಿಗಳು ಮೊನ್ನೆ ತಾನೇ ಅದನ್ನು ನೋಡಿಕೊಂಡು ಬಂದಿದ್ದಾರೆ. ಆದರೆ ಅಲ್ಲಿ ಪ್ರೈವೇಟ್